**ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ**

**ಸಿ.ಸಿ ಃ 1 /2022**

**ಸಾಕ್ಷಿದಾರರ ಹೆಸರು : ಸೋಮಯ್ಯ**

**ತಂದೆಯ ಹೆಸರು : ಲೇಟ್ ಹುಚ್ಚಯ್ಯ**

**ವಯಸ್ಸು : 58 ವರ್ಷ**

**ಉದ್ಯೋಗ : ಭೂ ಮಾಪಕರು**

**ವಾಸಸ್ಥಳ : ಶೃಂಗೇರಿ**

**ಸಿ.ಡಬ್ಲ್ಯೂ - 05**

**ಪಿ.ಡಬ್ಲ್ಯೂ - 04**

**ದಿನಾಂಕಃ 27.06.2023 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ : ಮಾನ್ಯ : ಎಪಿಪಿಯವರಿಂದ ::**

ನಾನು 1997 ರಿಂದ ಈ ತನ ಶೃಂಗೇರಿ ಭೂ ಮಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಚಾಸಾ 1, 4, 6 ಮತ್ತು 7 ರವರು ನನಗೆ ಗೊತ್ತು. ದಿಃ 21/12/2018 ರಂದು ಚಾಸಾ 4 ರವರು ನನಗೆ ಶೃಂಗೇರಿ ತಾಲ್ಲೂಕು ಸರ್ವೇ ನಂಬರ್ 215 ರಲ್ಲಿ 2 ಗುಂಟೆಗೆ ಸಂಬಂಧಿಸಿ ನಕಾಶೆ ತಯಾರು ಮಾಡಲು ನನಗೆ ಆದೇಶ ನೀಡಿದ್ದು ಈ ಸಂಬಂಧ ಅದೇ ದಿನ ನಾನು ಸ್ಥಳಕ್ಕೆ ಹೋಗಿದ್ದು, ಸ್ಥಳ ಪರಿಶೀಲನೆ ಮಾಡಿ ಕಚ್ಚಾ ನಕಾಶೆ ತಯಾರಿಸಿ ಕಚೇರಿಗೆ ಬಂದು ಪಕ್ಕಾ ನಕಾಶೆ ತಯಾರು ಮಾಡಿ ನೀಡಿರುತ್ತೇನೆ. ನಾನು ಕಚ್ಚಾ ನಕಾಶೆ ಮಾಡುವ ಸಮಯದಲ್ಲಿ ಚಾಸಾ 4, 6, 7 ರವರು ಹಾಜರಿದ್ದರು. ಈ ಸಂಬಂಧ ಪೋಲಿಸರು ನನ್ನನ್ನು ವಿಚಾರಣೆ ಮಾಡಿದ್ದು ನಾನು ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ನಕಾಶೆ ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ 8 ಎಂದು ಗುರುತಿಸಲಾಗಿರುತ್ತದೆ.

**ಪಾಟೀ ಸವಾಲು ಆರೋಪಿ ಪರ ಶ್ರೀ. ಐ ಎಸ್ ಟಿ  ವಕೀಲರಿಂದ :**

ನ್ಯಾಯಾಲಯದಿಂದ ಸಾಕಷ್ಟು ಸಲ ಭೂಮಿಯನ್ನು ಅಳತೆ ಮಾಡಿಕೊಡಬೇಕೆಂದು ಆದೇಶಗಳು ಬಂದಿರುತ್ತದೆ ಎಂದರೆ ಸರಿ. ನಾನು ಸರ್ವೇ ಮ್ಯಾನ್ಯೂವೆಲ್ ಪ್ರಕಾರ ಅಳತೆ ಮಾಡಿರುತ್ತೇನೆ ಎಂದರೆ ಸರಿ. ಸರ್ವೇ ಮ್ಯಾನ್ಯೂವೆಲ್ ಪ್ರಕಾರ ಯಾವುದೇ ಸ್ಥಳಕ್ಕೆ ಸಂಬಂಧಿಸಿ

ಸರ್ವೆ ಮಾಡಬೇಕಾದರೆ ಹಾಜುಬಾಜುದಾರರಿಗೆ ನೋಟಿಸ್ ನೀಡಬೇಕು ಎಂದರೆ ಸರಿ. ಸಾಕ್ಷಿ ಮುಂದುವರೆದು ನ್ಯಾಯಾಧೀಶರು ಸ್ಥಳದಲ್ಲಿ ಹಾಜರಿದ್ದರಿಂದ ಮತ್ತು ಮೌಖಿಕ ಆದೇಶವಿರುವುದರಿಂದ ತುರ್ತಾಗಿ ನಕಾಶೆ ಮಾಡಿರುತ್ತೇನೆಂದು ನುಡಿದಿರುತ್ತಾರೆ. ಚೈನ್ ಸರ್ವೆ ಪದ್ಧತಿಯಲ್ಲಿ ಚೈನನ್ನು ಎಳೆದುಕೊಂಡು ಹಿಡಿದ್ದಲ್ಲಿ ಕಮ್ಮಿ ಜಾಗ ತೋರಿಸುತ್ತದೆ, ಚೈನ್ನನ್ನು ಲೂಸಾಗಿ ಹಿಡಿದು ಅಳತೆ ಮಾಡಿದಾಗ ಜಾಸ್ತಿ ಜಾಗ ತೋರಿಸುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಮ್ಯಾನ್ಯೂವೆಲ್ ಪ್ರಕಾರ ಸರ್ವೆ ಮಾಡಿರುತ್ತೇನೆಂದು ನುಡಿದಿರುತ್ತಾರೆ.

2018 ರಲ್ಲಿ GPS ಸರ್ವೆ ಬಂದಿರುತ್ತದೆ ಎಂದರೆ ಸರಿ. ಸರ್ವೆ ಮಾಡುವ ಸಮಯದಲ್ಲಿ ಮಹಜರ್ ಮಾಡಿ ಹಾಜುಬಾಜುದಾರರ ಒಪ್ಪಿ ಪಡೆಯಬೇಕಾಗುತ್ತದೆ ಎಂದರೆ ಸರಿ. ತುರ್ತಾಗಿರುವುದರಿಂದ ಪಡೆದಿರುವುದಿಲ್ಲ ಎಂದು ನುಡಿದಿರುತ್ತಾರೆ. ಸರ್ವೆ ಮಾಡುವ ಸಮಯದಲ್ಲಿ ನಾನು ಯಾವ ಯಾವ ದಾಖಲೆಗಳನ್ನು ತೆಗೆದುಕೊಂಡು ಹೋಗಿರುತ್ತೇನೆಂದು ನನ್ನ ಹೇಳಿಕೆಯಲ್ಲಿ ನಮೂದು ಇರುವುದಿಲ್ಲ ಎಂದರೆ ಸರಿ. ನಾನು ಕಚ್ಚಾ ನಕಾಶೆ ತಯಾರು ಮಾಡಿದಾಗ ಬೇರೆ ಯಾರ ಸಹಿ ಪಡೆದಿರುವುದಿಲ್ಲ. ಕಚ್ಚಾ ನಕಾಶೆ, ಪಕ್ಕಾ ನಕಾಶೆ ಒಂದೇ ದಿನ ಮಾಡಿರುತ್ತೇನೆ ಮತ್ತು ಕಚೇರಿ ವೇಳೆಯಲ್ಲಿ ನಕಾಶೆಯನ್ನು ಚಾಸಾ 5 ರವರಿಗೆ ನೀಡಿರುತ್ತೇನೆ. ಪಕ್ಕಾ ನಕಾಶೆಗೆ ತಹಶೀಲ್ದಾರರವರ ಸಹಿ ಪಡೆದು ನಮ್ಮ ಕಚೇರಿಗೆ ನೀಡಿ ಸೂಪರ್ ವೈಜರ್ ಸಹಿ ಮಾಡಿಸಿ ಪುನಃ ಅದೇ ದಿನ ನಮ್ಮ ಕಚೇರಿಯಿಂದ ತಹಶೀಲ್ದಾರರವರಿಗೆ ನೀಡಿರುತ್ತೇನೆ. ನಿಪಿ 8 ಮೂಲ ದಾಖಲೆ ಎಲ್ಲಿದೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಯಾವುದೇ ಸ್ಥಳಕ್ಕೆ ಹೋಗಿರುವುದಿಲ್ಲ ನಕಾಶೆ ತಯಾರು ಮಾಡಿರುವುದಿಲ್ಲ, ತಹಶೀಲ್ದಾರರವರಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**ಃಮರುವಿಚಾರಣೆ ಇಲ್ಲಃ**

**(ದಿನಾಂಕಃ 27.06.2023 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

Sd/-
**ಪ್ರ.ದ.ನ್ಯಾ.ದಂಃ ಶೃಂಗೇರಿ**

**ಸಾಕ್ಷಿ ಸಹಿಃ**